ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು.

ದಿನಾಂಕಃ 23.02.2026

ಸಿ.ಸಿ.ನಂ.1085/2025

ಪಿರ್ಯಾದುದಾರರು: ರಾಜ್ಯದ ಪರವಾಗಿ ಸಿಇಎನ್ ಪೋಲೀಸರು,
ಚಿಕ್ಕಮಗಳೂರು.

ವಿರುದ್ಧ

ಆರೋಪಿ: ಪೂರ್ಣೇಶ ಕೆ.ಎಂ.
ಬಿನ್ ಲೇಟ್ ಮಗಪ್ಪಗೌಡ,
ವಯಸ್ಸು ಸುಮಾರು 49 ವರ್ಷ,
ವಾಸಃ ಕಬ್ಬಿಣಸೇತುವೆ ಗ್ರಾಮ,
ಕೆಳಗೂರು ಅಂಚೆ, ಆಲ್ದೂರು
ಹೋಬಳಿ, ಚಿಕ್ಕಮಗಳೂರು.

ದಂಡ ಪ್ರಕ್ರಿಯ ಸಂಹಿತೆ ಕಲಂಃ 313 ರ ಅಡಿಯಲ್ಲಿ ಆರೋಪಿ ಹೇಳಿಕೆ

1. ಅಭಿಯೋಜನೆಯವರ ಪರ ಸಾಕ್ಷಿ ವಿಚಾರಣೆಯನ್ನು ಕೇಳಿರುವಿಯಾ?

   ಉತ್ತರ :

2. ಫ್ರಾಸಾ-1 – ದೇವರಾಜ್ ಮತ್ತು ಫ್ರಾಸಾ-2 – ಅಶೋಕ ಇವರುಗಳು ತಮ್ಮ ಸಾಕ್ಷ್ಯದಲ್ಲಿ ತಾವು ಕಬ್ಬಿಣಸೇತುವೆಯ ಹತ್ತಿರ ರಾತ್ರಿ 08-00 ಗಂಟೆಗೆ ನಿಪಿ-1-ನೋಟೀಸು ಮತ್ತು ನಿಪಿ-2 - ಮಹಜರಿಗೆ ಸಹಿ ಮಾಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

   ಉತ್ತರ :

3. ಫ್ರಾಸಾ-3 - ಮಹಾದೇವಸ್ವಾಮಿ ಬಿ. ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 28.03.2025 ರಂದು ತಾನು ಠಾಣಾ ಕರ್ತವ್ಯದಲ್ಲಿದ್ದಾಗ

ಚಾಸಾ-1 ರವರು ತನ್ನನ್ನು ಹಾಗೂ ಚಾಸಾ-5 ಮತ್ತು ಚಾಸಾ-6 ರವರನ್ನು ಕರೆದು ಚಿಕ್ಕಮಗಳೂರು ತಾಲ್ಲೂಕು, ಆಲ್ದೂರು ಹೋಬಳಿಯ, ಕಬ್ಬಿಣಸೇತುವೆ ಗ್ರಾಮದ ವಾಸಿ ಆರೋಪಿಯಾದ ನೀವು ನಿಮ್ಮ ಮನೆಯ ಹಿಂಭಾಗದ ದನದ ಕೊಟ್ಟಿಗೆ ಹತ್ತಿರ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದಾಗಿ ತಿಳಿಸಿದ್ದಾಗಿಯೂ, ಈ ಬಗ್ಗೆ ಠಾಣಾ ಮೊಕದ್ದಮೆ ಸಂಖ್ಯೆಃ18/2025 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ದಾಳಿ ಮಾಡುವ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

4. ಫ್ರಾಸಾ-3 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಸಂಜೆಃ 06.50 ಗಂಟೆಗೆ ಠಾಣೆಯಿಂದ ಹೊರಟು ಕಬ್ಬಿಣಸೇತುವೆ ಗ್ರಾಮದ ಹತ್ತಿರ ಇರುವ ಪೆಟ್ರೋಲ್ ಬಂಕ್ ಬಳಿ ಕಾರನ್ನು ನಿಲ್ಲಿಸಿದ್ದು, ರಸ್ತೆ ಬದಿಯಲ್ಲಿ ನಿಂತಿದ್ದ ಚಾಸಾ-2 ಮತ್ತು ಚಾಸಾ-3 ರವರನ್ನು ಕರೆದು ಅವರಿಗೆ ವಿಷಯವನ್ನು ತಿಳಿಸಿ ಅವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡು ಅವರೊಂದಿಗೆ ಸದರಿ ಮನೆಯ ಹತ್ತಿರ ಹೋಗಿ ನೋಡಲಾಗಿ ಮನೆಯ ಬಾಗಿಲು ಬೀಗ ಹಾಕಿದ್ದು, ಪಕ್ಕದ ಶೆಡ್ ನ ಹತ್ತಿರ ಒಬ್ಬ ವ್ಯಕ್ತಿಯು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಅಕ್ರಮವಾಗಿ ಮಧ್ಯವನ್ನು ಇಟ್ಟುಕೊಂಡು ಜನರಿಗೆ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

5. ಫ್ರಾಸಾ-3 ಇವರು ತಮ್ಮ ಮುಂದುವರಿದ ನುಡಿ ಸಾಕ್ಷ್ಯದಲ್ಲಿ ನಂತರ ಮೊಬೈಲ್ ಟಾರ್ಚ್ ನ ಬೆಳಕಿನ ಸಹಾಯದಿಂದ ಸ್ಥಳದ ಹತ್ತಿರ ಹೋಗಿದ್ದು, ಆರೋಪಿಯಾದ ನೀವು ಕಾಫಿ ತೋಟದ ಒಳಗಡೆ ಓಡಿ ಹೋಗಿ ತಪ್ಪಿಸಿಕೊಂಡಿದ್ದಾಗಿ, ನಂತರ ಸದರಿ ಸ್ಥಳದಲ್ಲಿ ಮಧ್ಯವನ್ನು ಖರೀದಿ ಮಾಡಲು ಬಂದಿದ್ದ ಇಬ್ಬರು ಗ್ರಾಹಕರನ್ನು ವಿಚಾರಿಸಲಾಗಿ ಅವರು ತಾವು ಆರೋಪಿಯಾದ ನಿಮ್ಮ ಹತ್ತಿರ ಮಧ್ಯವನ್ನು ಖರೀದಿ ಮಾಡಲು ಬಂದಿರುವುದಾಗಿ ತಿಳಿಸಿದ್ದಾಗಿಯೂ, ನಂತರ ಸ್ಥಳದಲ್ಲಿದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮಧ್ಯ ತುಂಬಿದ ಓರಿಜಿನಲ್

ಚಾಯ್ಸ್ ವಿಸ್ಕಿಯ 90 ಎಂ.ಎಲ್ ನ ಒಟ್ಟು 45 ಪೌಚುಗಳು, ಕ್ಯಾಪ್ಟನ್ ಮಾರ್ಟೀನ್ ಸ್ಪೆಷಲ್ ವಿಸ್ಕಿಯ 90 ಎಂ.ಎಲ್ ನ ಒಟ್ಟು 23 ಪೌಚುಗಳು, ಓಲ್ಡ್ ಟವರಿನ್ ವಿಸ್ಕಿಯ 180 ಎಂ.ಎಲ್ ನ ಒಟ್ಟು 7 ಪೌಚುಗಳು, ಬ್ಯಾಕ್ ಪೈಪರ್ ವಿಸ್ಕಿಯ 90 ಎಂ.ಎಲ್ ನ ಒಟ್ಟು 7 ಪೌಚುಗಳು ಕಂಡುಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

6. ಫ್ರಾಸಾ-3 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ಸದರಿ ಮದ್ಯದ ಪೌಚ್ ಗಳ ಬ್ಯಾಚ್ ನಂಬರ್ ಹಾಗೂ ಸೀರಿಯಲ್ ನಂಬರ್ ಅನ್ನು ನಮೂದು ಮಾಡಿದ್ದಾಗಿಯೂ ನಂತರ ಅವುಗಳೆಲ್ಲವನ್ನೂ ಅದೇ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಪಿ ಎಂದು ಸೀಲು ಮಾಡಿದ್ದಾಗಿಯೂ, ಸದರಿ ಸ್ಥಳದಲ್ಲಿ ಫೋಟೋವನ್ನು ತನ್ನ ಮೊಬೈಲ್ ನಿಂದ ತೆಗೆದಿದ್ದಾಗಿಯೂ, ಸದರಿ ಮಹಜರನ್ನು 07.40 ರಿಂದ 08.40 ರವರೆಗೆ ತಯಾರಿಸಿದ್ದಾಗಿಯೂ, ನಂತರ ಠಾಣೆಗೆ ವಾಪಾಸಾಗಿ ಸದರಿ ಫೋಟೋವನ್ನು ತನ್ನ ಮೊಬೈಲ್ ನಿಂದ ಠಾಣಾ ಕಂಪ್ಯೂಟರ್ ಮೂಲಕ ಸಿ.ಡಿಗೆ ವರ್ಗಾಯಿಸಿದ್ದಾಗಿಯೂ ನಂತರ ಫೋಟೋದ ಹ್ಯಾಷ್ ವ್ಯಾಲ್ಯೂ ತೆಗೆದು 65(ಬಿ) ಪ್ರಮಾಣ ಪತ್ರವನ್ನು ನೀಡಿದ್ದಾಗಿಯೂ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

7. ಫ್ರಾಸಾ-4 - ಅಬ್ದುಲ್ ಖಾದರ್ - ಪಿಐ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 28.03.2025 ರಂದು ಸಂಜೆಃ 06.00 ಗಂಟೆಗೆ ತಾನು ಠಾಣೆಯಲ್ಲಿದ್ದಾಗ ಆಲ್ದೂರು ಹೋಬಳಿ, ಕಬ್ಬಿಣಸೇತುವೆ ಗ್ರಾಮದ ಆರೋಪಿಯಾದ ನಿಮ್ಮ ಮನೆಯ ಹಿಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಎಂದು ಬಂದ ಖಚಿತ ವರ್ತಮಾನದ ಮೇರೆಗೆ ಮೇಲಾಧಿಕಾರಿಯವರಿಗೆ ವಿಷಯ ತಿಳಿಸಿ ಸ್ವಪಿರ್ಯಾದಿಯ ಮೇರೆಗೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದಾಗಿ, ಚಾಸಾ-4 ರಿಂದ ಚಾಸಾ-6 ರವರೊಂದಿಗೆ ಸಂಜೆಃ06.50 ಗಂಟೆಗೆ ಠಾಣೆಯಿಂದ ಹೊರಟು ಕಬ್ಬಿಣಸೇತುವೆ ಗ್ರಾಮದ ಪೆಟ್ರೋಲ್

ಬಂಕ್ ಬಳಿ ಹೋಗಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಪರಿಚಯಿಸಿಕೊಂಡು ಅವರಿಗೆ ವಿಷಯವನ್ನು ತಿಳಿಸಿದ್ದಾಗಿ, ನಂತರ ಅವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡು ಮಾಹಿತಿ ಇದ್ದ ಮನೆಯ ಹಿಂಭಾಗ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿಯು 4 ಜನರಿಗೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು ಇಟ್ಟು ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದಾಗಿಯೂ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

8. ಪ್ರಾಸಾ-4 ರವರು ತಮ್ಮ ಮುುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಸದರಿ ಸ್ಥಳಕ್ಕೆ ದಾಳಿ ಮಾಡಲು ಹೋಗುತ್ತಿದ್ದಂತೆ ತಮ್ಮನ್ನು ನೋಡಿ ಆ ವ್ಯಕ್ತಿಯು ಹಾಗೂ 4 ಜನ ಗ್ರಾಹಕರು ಓಡಿ ಹೋಗಿದ್ದಾಗಿ, ನಂತರ ಆ ಸ್ಥಳಕ್ಕೆ ಇನ್ನಿಬ್ಬರು ವ್ಯಕ್ತಿಗಳು ಬಂದಿದ್ದು, ಅವರನ್ನು ವಿಚಾರಿಸಲಾಗಿ ಅವರು ಮದ್ಯವನ್ನು ಖರೀದಿಸಲು ಅಲ್ಲಿಗೆ ಬಂದಿರುವುದಾಗಿ ತಿಳಿಸಿದ್ದಾಗಿಯೂ, ನಂತರ ಪಂಚರ ಸಮಕ್ಷಮ ಸ್ಥಳದಲ್ಲಿದ್ದ 90 ಎಂ.ಎಲ್. ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 45 ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್. ನ ಕ್ಯಾಪ್ಟನ್ ಮಾರ್ಟಿನ್ ಸ್ಪೆಷಲ್ ವಿಸ್ಕಿಯ 23 ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್. ನ ಬ್ಯಾಕ್ ಪೈಪರ್ ವಿಸ್ಕಿಯ 7 ಟೆಟ್ರಾ ಪ್ಯಾಕೇಟ್ ಗಳು, 180 ಎಂ.ಎಲ್. ನ ಓಲ್ಡ್ ಟವರಿನ್ ವಿಸ್ಕಿಯ 7 ಟೆಟ್ರಾ ಪ್ಯಾಕೇಟ್‌ಗಳನ್ನು ಪಂಚರ ಸಮಕ್ಷಮ ಪರಿಶೀಲಿಸಿ ಅಲ್ಲಿಯೇ ಇದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಸಿ ಸೀಲು ಮಾಡಿದ್ದಾಗಿಯೂ, ಸ್ಥಳದಲ್ಲಿ ಪಂಚನಾಮೆಯನ್ನು ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಿ ಠಾಣೆಗೆ ವಾಪಾಸಾಗಿ ವರದಿಯನ್ನು ತಯಾರಿಸಿ ಚಾಸಾ-9 ರವರಿಗೆ ನೀಡಿದ್ದಾಗಿಯೂ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

9. ಪ್ರಾಸಾ-5 - ಜೆ.ಎಸ್.ತಿಪ್ಪೇಸ್ವಾಮಿ - ಡಿ.ವೈ.ಎಸ್.ಪಿ. ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 29.03.2025 ರಂದು ಚಾಸಾ-1 ರವರು ನೀಡಿದ ವರದಿ ಮತ್ತು ಸ್ವತ್ತುಗಳನ್ನು ಸ್ವೀಕರಿಸಿಕೊಂಡು ಪರಿಶೀಲನೆ

ಮಾಡಿದ್ದಾಗಿಯೂ, ಅವರು ಹಾಜರುಪಡಿಸಿದ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿದ್ದಾಗಿಯೂ ನಂತರ ದಿಃ30.03.2025 ರಂದು ಪ್ರಕರಣದ ದಾಳಿಯ ವೇಳೆಯಲ್ಲಿ ತೆಗೆದ ಫೋಟೋವನ್ನು ಸಿ.ಡಿ.ಗೆ ವರ್ಗಾಯಿಸಿದ ಬಗ್ಗೆ ಚಾಸಾ-4 ರವರು ನೀಡಿದ 65(ಬಿ) ಪ್ರಮಾಣ ಪತ್ರವನ್ನು ಪಡೆದಿದ್ದಾಗಿಯೂ, ನಂತರ ದಿಃ02.04.2025 ರಂದು ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ಪಡೆದಿದ್ದಾಗಿಯೂ, ದಿಃ16.04.2025 ರಂದು ಅಮಾನತ್ತುಪಡಿಸಿದ ಮದ್ಯವನ್ನು ತಜ್ಞರ ಪರೀಕ್ಷೆ ಬಗ್ಗೆ ಚಾಸಾ-4 ರವರ ಮೂಲಕ ಕಳುಹಿಸಿಕೊಟ್ಟಿದ್ದಾಗಿಯೂ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

10. ಫ್ರಾಸಾ-5 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ದಿನಾಂಕಃ ದಿಃ25.05.2025 ರಂದು ಎಫ್.ಎಸ್.ಎಲ್ ವರದಿಯನ್ನು ಪಡೆದಿದ್ದಾಗಿಯೂ, ನಂತರ ಅದೇ ದಿನ ಆರೋಪಿಯಾದ ನೀವು ನಿರೀಕ್ಷಣಾ ಜಾಮೀನಿನೊಂದಿಗೆ ಠಾಣೆಗೆ ಹಾಜರಾಗಿದ್ದು ಸೂಕ್ತ ಜಾಮೀನು ಪಡೆದುಕೊಂಡು ಬಿಟ್ಟಿದ್ದಾಗಿಯೂ, ಚಾಸಾ-2 ಮತ್ತು ಚಾಸಾ-3 ರವರು ತನ್ನ ಮುಂದೆ ನಿಪಿ-3 ಮತ್ತು 4 ರಂತೆ ಹೇಳಿಕೆಯನ್ನು ನೀಡಿದ್ದಾಗಿಯೂ, ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯಾದ ನಿಮ್ಮ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿಯೂ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

11. ಫ್ರಾಸಾ-6 - ಹೇಮಂತ್ ಕುಮಾರ್ ಹೆಚ್. - ಪಿಸಿ-599 ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 28.03.2025 ರಂದು ಚಾಸಾ-1 ರವರು ತನ್ನನ್ನು ಹಾಗೂ ಚಾಸಾ-4 ಮತ್ತು ಚಾಸಾ-5 ರವರನ್ನು ಕರೆದು ಈ ಕೇಸಿನ ಮಾಹಿತಿಯನ್ನು ತಿಳಿಸಿ ದಾಳಿ ಮಾಡಲು ಸಹಕರಿಸುವಂತೆ ತಿಳಿಸಿದ್ದು, ಆ ಪ್ರಕಾರ ಚಾಸಾ-1 ರವರ ಜೊತೆ ಸಂಜೆ 07-30 ಗಂಟೆಗೆ ಘಟನಾ ಸ್ಥಳವನ್ನು ತಲುಪಿದ್ದಾಗಿಯೂ, ರಸ್ತೆ ಬದಿಯಲ್ಲಿ ನಿಂತಿದ್ದ ಇಬ್ಬರು ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡು ಅವರಿಗೆ ಮಾಹಿತಿ

ವಿಷಯವನ್ನು ತಿಳಿಸಿ ಅವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡು ಅವರೊಂದಿಗೆ ಸದರಿ ಮನೆಯ ಹತ್ತಿರ ಹೋಗಿ ನೋಡಲಾಗಿ ಮನೆಯ ಬಾಗಿಲು ಬೀಗ ಹಾಕಿದ್ದು, ಮನೆಯ ಹಿಂಭಾಗ ಒಂದು ದನದ ಕೊಟ್ಟಿಗೆ ಇದ್ದು, ಅಲ್ಲಿ ಮರೆಯಲ್ಲಿ ನಿಂತು ನೋಡಲಾಗಿ, ದನದ ಕೊಟ್ಟಿಗೆ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ 4 ರಿಂದ 5 ಜನರು ಇದ್ದು, ಒಬ್ಬರು ಕುಳಿತುಕೊಂಡು ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡಿದ್ದಾಗಿ, ತಾವು ಮರೆಯಲ್ಲಿ ನಿಂತು ಗಮನಿಸಲಾಗಿ ಮದ್ಯವನ್ನು ಖರೀದಿಸುತ್ತಿರುವುದು ಕಂಡುಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

12. ಫ್ರಾಸಾ-6 ಇವರು ತಮ್ಮ ಮುಂದುವರಿದ ನುಡಿ ಸಾಕ್ಷದಲ್ಲಿ ನಂತರ ಮೊಬೈಲ್ ಟಾರ್ಚ್ ನ ಬೆಳಕಿನ ಸಹಾಯದಿಂದ ಸ್ಥಳದ ಹತ್ತಿರ ಹೋಗಿದ್ದು, ಆರೋಪಿಯಾದ ನೀವು ಚೀಲವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿ ತಪ್ಪಿಸಿಕೊಂಡಿದ್ದಾಗಿಯೂ, ನಂತರ ಸದರಿ ಸ್ಥಳದಲ್ಲಿ ಮದ್ಯವನ್ನು ಖರೀದಿ ಮಾಡಲು ಬಂದಿದ್ದ ಇಬ್ಬರು ಗ್ರಾಹಕರನ್ನು ವಿಚಾರಿಸಲಾಗಿ ಅವರು ತಾವು ಆರೋಪಿಯಾದ ನೀವು ಮದ್ಯವನ್ನು ಮಾರಾಟ ಮಾಡುತ್ತಿದ್ದು ಅದನ್ನು ಖರೀದಿ ಮಾಡಲು ಬಂದಿರುವುದಾಗಿ ತಿಳಿಸಿದ್ದಾಗಿಯೂ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

13. ಫ್ರಾಸಾ-6 ಇವರು ತಮ್ಮ ಮುಂದುವರಿದ ನುಡಿ ಸಾಕ್ಷದಲ್ಲಿ ನಂತರ ಸ್ಥಳದಲ್ಲಿದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ 90 ಎಂ.ಎಲ್ ನ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 45 ಪ್ಯಾಕೆಟ್‌ಗಳು, 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 45 ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್.ನ ಕ್ಯಾಪ್ಟನ್ ಮಾರ್ಟೀನ್ ಸ್ಪೆಷಲ್ ವಿಸ್ಕಿಯ 23 ಟೆಟ್ರಾ ಪ್ಯಾಕೇಟ್ ಗಳು, 180 ಎಂ.ಎಲ್.ನ ಓಲ್ಡ್ ಟವರಿನ್ ವಿಸ್ಕಿಯ 7 ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್.ನ ಬ್ಯಾಗ್ ಪೈಪರ್ ವಿಸ್ಕಿಯ 7 ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡುಬಂದಿದ್ದಾಗಿಯೂ,

ನಂತರ ಚಾಸಾ-1 ರವರು ಪಂಚರ ಸಮಕ್ಷಮ ಮಹಜರ್ ಮೂಲಕ ಅವುಗಳನ್ನು ಅಮಾನತ್ತುಪಡಿಸಿಕೊಂಡಿದ್ದಾಗಿಯೂ, ಸದರಿ ಮದ್ಯದ ಪ್ಯಾಕೇಟ್ ಗಳನ್ನು ಅದೇ ಚೀಲದಲ್ಲಿ ಹಾಕಿ ಸೀಲು ಮಾಡಿ ಚಾಸಾ-1 ಹಾಗೂ ಪಂಚರ ನಿರ್ದೇಶನದಂತೆ ಮಹಜರ್ ಬರೆದಿದ್ದಾಗಿಯೂ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

14. ನೀವು ಈ ಕೇಸಿನಲ್ಲಿ ಹೆಚ್ಚಿಗೆ ಏನನ್ನಾದರು ಹೇಳುವುದಿದೆಯೇ?

ಉತ್ತರಃ

15. ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲೆ ಹಾಜರುಪಡಿಸುತ್ತೀರಾ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ಕೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜವಾಗಿದೆ ಎಂದು ಧೃಡೀಕರಿಸುತ್ತೇನೆ.

Sd/-
[ಕುಮಾರಿ ಸುಜಾತ ]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮು.ನ್ಯಾದಂ., ಚಿಕ್ಕಮಗಳೂರು.